ಕೊಂಕಣ ರೈಲ್ವೆಗಾಗಿ ಭೂಮಿ ಕಳೆದುಕೊಂಡವರಿಗೆ ಉದ್ಯೋಗ

459 (1733)ಶ್ರೀ ಆರ್.ಎ.ದೇಶಪಾಂಡೆ (ಹಳಿಯಾಳ)

ಕಂದಾಯ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಕೊಂಕಣ ರೈಲ್ವೆ ಯೋಜನೆಯ ಸಲುವಾಗಿ ರಾಜ್ಯದಲ್ಲಿ ಎಷ್ಟು ಎಕರೆಗಳ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗುವುದು. ಈ ಪೈಕಿ ಇದುವರೆವಿಗೂ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಇದಕ್ಕಾಗಿ ನೀಡಿರುವ ಪರಿಹಾರ ಎಷ್ಟು? (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು);

ಆ) ಕೊಂಕಣ ರೈಲ್ವೆಯಡಿಯಲ್ಲಿ ಭೂಮಿ ಕಳೆದುಕೊಂಡ ಕುಟುಂಬದ ಪೈಕಿ ಒಬ್ಬರಿಗೆ ರೈಲ್ವೆಯಲ್ಲಿ ಉದ್ಯೋಗ ಕೊಡುವಂತೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಿದೆಯೇ ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):-

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 1113 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು. ಇಲ್ಲಿಯವರೆಗೆ ಯಾವ ಭೂಮಿಯನ್ನು ವಶಪಡಿಸಿಕೊಂಡಿಲ್ಲ. ಹಾಗೂ ಇಲ್ಲಿಯವರೆಗೆ 26 ಹಳ್ಳಿಗಳಲ್ಲಿ ಜಮೀನಿಗೆ ಶೇಕಡಾ 80 ರಂತೆ ರೂ 40 ಲಕ್ಷಗಳನ್ನು ನೀಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು1406.73 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗುವುದು. ಅದರಲ್ಲಿ ಈಗಾಗಲೇ 1028.33 ಎಕರೆ ಜಮೀನನ್ನು ಸ್ವಾಧೀನ ಪಡೆದು ರೂ 1253.84 ಲಕ್ಷ ರೂಗಳ ಪರಿಹಾರವನ್ನು ನೀಡಿದೆ.

ಆ) ಪರಿಗಣಿಸುವುದಾಗಿ ಸಂಬಂಧಪಟ್ಟವರು ತಿಳಿಸಿದ್ದಾರೆ.

ಗ್ರಾಮ ಲೆಕ್ಕಿಗರ ನೇಮಕಾತಿ.

460 (2139)ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗಾ)

ಕಂದಾಯ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ರಾಜ್ಯದಲ್ಲಿ ಎಷ್ಟು ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇವೆ ; (ಜಿಲ್ಲಾವಾರು ವಿವರ ನೀಡುವುದು);

ಆ) ಗ್ರಾಮಲೆಕ್ಕಿಗರನ್ನು ಸರ್ಕಾರ ಭರ್ತಿ ಮಾಡುವುದೆ ;

ಇ) ಹಾಗಿದ್ದಲ್ಲಿ, ಯಾವಾಗ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) 2034, ಜಿಲ್ಲಾವಾರು ವಿವರ ಈ ಕೆಳಗಿನಂತಿದೆ:

1	ಬೆಂಗಳೂರು (ನ)	5
2	ಬೆಂಗಳೂರು (ಗ್ರಾ)	82
3	ಕೋಲಾರ	124
4	ಶಿವಮೊಗ್ಗ	18
5	ಚಿತ್ರದುರ್ಗ	96
6	ತುಮಕೂರು	173
7	ಮೈಸೂರು	125

8	ಚಿಕ್ಕಮಗಳೂರು	58
9	ಹಾಸನ	137
10	ದಕ್ಷಿಣ ಕನ್ನಡ	144
11	ಮಂಡ್ಯ	78
12	ಕೊಡಗು	12
13	ಗುಲ್ಬರ್ಗ	196
14	ಬೀದರ್	-
15	ಬಳ್ಳಾರಿ	105
16	ರಾಯಚೂರು	83
17	ಬೆಳಗಾವಿ	133
18	ಧಾರವಾಡ	339
19	ಉತ್ತರ ಕನ್ನಡ	77
20	ವಿಜಾಪುರ	49
		2034

ಆ) ಹೌದು

ಇ) ಆದಷ್ಟು ಬೇಗ

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತಮೂಲಕ ನೀಡಲಾದ ಉತ್ತರಗಳು

ಶ್ರೀ ಜಿ.ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ 26.3.1992ರ ಲಿಖಿತ ಮೂಲಕ ಉತ್ತರಿಸುವ 23ನೇ ಪಟ್ಟಿಯಲ್ಲಿನ 24 ಪ್ರಶ್ನೆಗಳ ಪೈಕಿ 9ನೇ ಪ್ರಶ್ನೆಯನ್ನು ಹೊರತುಪಡಿಸಿ ಇನ್ನುಳಿದ 15 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯಮುಂದೆ ಮಂಡಿಸುತ್ತೇನೆ.

ಇನಾಂದಾರರಿಗೆ ಅಧಿಭೋಗದಾರಿಕೆ ಹಕ್ಕಿಗಾಗಿ ಅರ್ಜಿ ಸಲ್ಲಿಸಲು ಕಾಲಾವಕಾಶ ವಿಸ್ತರಣೆ

1556(2291) ಶ್ರೀ ಕೆ.ಸಿದ್ದಯ್ಯ (ಸಂತೇಮರಳ್ಳಿ)

ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :-

ಅ) ಸೇವಾ ಇನಾಂ ಭೂಮಿ ಹೊಂದಿರುವ ಇನಾಂದಾರರು ಅಧಿಭೋಗದಾರಿಕೆ ಹಕ್ಕಿಗಾಗಿ ಅರ್ಜಿ ಸಲ್ಲಿಸಲು ಕಾಲಾವಕಾಶವನ್ನು ವಿಸ್ತರಿಸುವಂತೆ ವಿಶೇಷವಾಗಿ ತೋಟಿಗಳು (ಗ್ರಾಮಸೇವಕರು) ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಕರ್ನಾಟಕ (ಪರ್ಸನಲ್ ಮತ್ತು ಮಿಸ್‌ಲೇನಿಯಸ್) ಇನಾಂ ರದ್ದಿಯಾತಿ ಕಾಯ್ದೆ, 1954ರಡಿ ಅಧಿಭೋಗದಾರಿಕೆ ಹಕ್ಕಿಗಾಗಿ ಅರ್ಜಿ ಸಲ್ಲಿಸಲು ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಸರ್ಕಾರವು ಪರಿಶೀಲಿಸುವುದೇ ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-